# ಭಾಷೆಗಳನ್ನು ಉಳಿಸಿ

**ಮಾತನಾಡುವವರೇ ಇಲ್ಲದೆ ಕಣ್ಮರೆಯಾಗುತ್ತಿರುವ ಭಾಷೆಗಳನ್ನು ಉಳಿಸುವುದು ಹೇಗೆ ಎಂದು ನಾವೀಗ ಗಂಭೀರವಾಗಿ ಯೋಚಿಸಬೇಕಿದೆ.**

ದೇಶದಲ್ಲಿ ಕಳೆದ ಐದು ದಶಕಗಳಲ್ಲಿ ಸುಮಾರು 250 ಭಾಷೆಗಳು ಜನಬಳಕೆಯಿಂದ ಕಣ್ಮರೆಯಾಗಿವೆ ಎಂದು ವಡೋದರದ ಸಂಶೋಧನಾ ಸಂಸ್ಥೆ 'ದಿ ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೇ ಆಫ್ ಇಂಡಿಯಾ' ಇತ್ತೀಚೆಗೆ ವರದಿಯೊಂದನ್ನು ಪ್ರಕಟಿಸಿದೆ. 1961ರ ಜನಗಣತಿಯ ಪ್ರಕಾರ, ವೈವಿಧ್ಯಮಯ ಸಂಸ್ಕೃತಿಗೆ ಹೆಸರಾಗಿರುವ ಭಾರತದಲ್ಲಿ ಜನರು ಸುಮಾರು 1100 ಭಾಷೆಗಳನ್ನು ಮಾತನಾಡುತ್ತಿದ್ದಾರೆ ಎಂದು ಪ್ರಕಟಿಸಲಾಗಿತ್ತು. ಅಂದರೆ ಕಳೆದ ಐದೂವರೆ ದಶಕಗಳಲ್ಲಿ ಭಾರತೀಯರು ಬಳಸುವ ಭಾಷೆಗಳ ಸಂಖ್ಯೆ ಸುಮಾರು 850ಕ್ಕೆ ಇಳಿದಿದೆ. ಸಣ್ಣ ಪುಟ್ಟ ಭಾಷೆಗಳ ಮೇಲೆ ಮತ್ತು ಅವುಗಳನ್ನು ಆಧರಿಸಿರುವ ಸಂಸ್ಕೃತಿಗಳ ಮೇಲೆ ಈಗ ಬಹುಸಂಖ್ಯಾತರ ಭಾಷೆ– ಸಂಸ್ಕೃತಿ ನಡೆಸುತ್ತಿರುವ ದಬ್ಬಾಳಿಕೆಯನ್ನು ಗಮನಿಸಿದರೆ, ಇನ್ನು 50 ವರ್ಷಗಳಲ್ಲಿ ಭಾರತದಲ್ಲಿ ಇನ್ನೂ 400ರಷ್ಟು ಭಾಷೆಗಳು ನಶಿಸುವ ಸಾಧ್ಯತೆ ಇದೆ.

ಇದು ಕೇವಲ ಭಾರತದಲ್ಲಿ ಮಾತ್ರ ನಡೆಯುತ್ತಿರುವ ವಿದ್ಯಮಾನವಲ್ಲ, ಜಗತ್ತಿನ ಬಹುತೇಕ ದೇಶಗಳ ಸಮಸ್ಯೆ. ಕೆಲಸಮಯದ ಹಿಂದೆ ಪ್ರಕಟವಾದ ಯುನೆಸ್ಕೊ ವರದಿಯೂ, ಜಗತ್ತಿನಾದ್ಯಂತ ಭಾಷೆಗಳು ಅಳಿಯುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಜಗತ್ತಿನ ಸುಮಾರು 7000 ಭಾಷೆಗಳ ಪೈಕಿ 2500 ಭಾಷೆಗಳು ಅವನತಿಯ ಅಂಚಿನಲ್ಲಿವೆ ಎಂದು ಯುನೆಸ್ಕೊ ಪ್ರಕಟಿಸಿತ್ತು.

ಪ್ರತಿಯೊಂದು ಭಾಷೆಯೂ ಜಗತ್ತನ್ನು ಗಮನಿಸುವ ಮತ್ತು ಅರ್ಥ ಮಾಡಿಕೊಳ್ಳುವ ವಿಧಾನ ಪ್ರತ್ಯೇಕವೂ, ವಿಶಿಷ್ಟವೂ ಆಗಿದೆ. ಭಾಷೆಯೊಂದು ನಶಿಸುತ್ತಿದೆ ಎಂದರೆ ಅದರ ಜತೆಗೆ ಅದನ್ನು ಬಳಸುವ ಸಮುದಾಯದ ಸಂಸ್ಕೃತಿ ಮತ್ತು ಜೀವನಕ್ರಮವೂ ಅಳಿಯುತ್ತಿದೆ ಎಂದರ್ಥ. ಸಮುದಾಯಗಳ ಅಸ್ಮಿತೆಯನ್ನು ಪ್ರತಿಬಿಂಬಿಸುವ ಮತ್ತು ವ್ಯಕ್ತಿಗಳ ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸುವ ಭಾಷೆಗಳು, ಆಯಾ ಸಮುದಾಯದ ಸಾಮಾಜಿಕ ಸ್ಮರಣೆಯನ್ನೂ ಎಚ್ಚರವಾಗಿಡುತ್ತದೆ. ಆದರೆ ಈಗ ಜಗತ್ತಿನಾದ್ಯಂತ ಏಕರೂಪತೆಯ ಸುಂಟರಗಾಳಿಯೊಂದು ಬೀಸುತ್ತಿದೆ. ಜನರ ಊಟ– ತಿಂಡಿ, ಉಡುಗೆ– ತೊಡುಗೆ, ನಡವಳಿಕೆ, ಮಾತನಾಡುವ ಕ್ರಮ, ಭಾಷೆ ಎಲ್ಲವೂ ಒಂದೇ ರೂಪದಲ್ಲಿ ಇರಬೇಕೆಂದು ಬಯಸುವವರು ಪ್ರಭುತ್ವದ ಮೇಲೆ ಹಿಡಿತ ಸಾಧಿಸಿದ್ದಾರೆ. ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿದವರು 'ಬಲಿಷ್ಠರಷ್ಟೇ ಉಳಿದುಕೊಳ್ಳುವುದು ನಿಸರ್ಗ ನಿಯಮ' ಎಂದು ಹೂಂಕರಿಸುತ್ತಿದ್ದಾರೆ.

ನಮ್ಮಲ್ಲೇ ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿಸಲು ಹೊರಟವರನ್ನು ಗಮನಿಸಿ. ಅವರ ಪ್ರಕಾರ, ರಾಜ್ಯಗಳಲ್ಲಿ ಇರುವ ಸಣ್ಣಪುಟ್ಟ ಭಾಷೆಗಳು ದೇಶದ ಏಕತೆಗೆ ಮಾರಕವಂತೆ! ರಾಷ್ಟ್ರದಲ್ಲಿರುವ ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳೇ ಎನ್ನುವುದನ್ನು ಅವರು ಗಮನಿಸುತ್ತಿಲ್ಲ. ಇಂಗ್ಲಿಷ್ ಜಗತ್ತಿನಾದ್ಯಂತ ಹಿಡಿತ ಸಾಧಿಸಿದ್ದು ಹೇಗೆ ಎನ್ನುವುದು ಇತಿಹಾಸವನ್ನು ನಿರ್ಮೋಹದಿಂದ ಓದಿದವರಿಗೆ ಅರ್ಥವಾಗುತ್ತದೆ. ವಸಾಹತುಶಾಹಿ ಅವಧಿಯಲ್ಲಿ ಸಾಮ್ರಾಜ್ಯಗಳ ವಿಸ್ತರಣೆಗೆ ಕೇವಲ ಕತ್ತಿ, ಕೋವಿ, ಮದ್ದು ಗುಂಡುಗಳಷ್ಟೇ ಬಳಕೆಯಾದದ್ದಲ್ಲ; ಜತೆಗೆ ಭಾಷೆಯ ಬಳಕೆಯೂ ಆಗಿದೆ ಎನ್ನುವುದನ್ನು ಗಮನಿಸಬೇಕು. ಬಂಡವಾಳಶಾಹಿ ದೈತ್ಯ ಕಂಪೆನಿಗಳು ಇವತ್ತು ದೃಶ್ಯಮಾಧ್ಯಮಗಳ ಮೂಲಕ ಜಗತ್ತಿನಾದ್ಯಂತ ಹರಡುತ್ತಿರುವ ಏಕರೂಪದ ಗ್ರಾಹಕ ಸಂಸ್ಕೃತಿಯನ್ನು ಗಮನಿಸಿದರೂ ಇದು ನಮಗೆ ಅರ್ಥವಾಗುತ್ತದೆ. ಪ್ರಸ್ತುತ, ಜಗತ್ತಿನ ಶೇಕಡಾ 95ರಷ್ಟು ಜನಸಂಖ್ಯೆ ಒಟ್ಟು 15 ಭಾಷೆಗಳನ್ನು ಮಾತ್ರ ಮಾತನಾಡುತ್ತಿದೆ ಎನ್ನುತ್ತಿದೆ ಯುನೆಸ್ಕೊ ವರದಿ.

ಮಾತನಾಡುವವರೇ ಇಲ್ಲದೆ ಕಣ್ಮರೆಯಾಗುತ್ತಿರುವ ಭಾಷೆಗಳನ್ನು ಉಳಿಸುವುದು ಹೇಗೆ ಎಂದು ನಾವೀಗ ಗಂಭೀರವಾಗಿ ಯೋಚಿಸಬೇಕಿದೆ. ಇದೇ ಸಂದರ್ಭದಲ್ಲಿ ತಳಸಂಸ್ಕೃತಿಯ ಸಮುದಾಯದವರ ಭಾಷೆಗಳನ್ನು ಉಳಿಸುವಾಗ, ಸಂಸ್ಕೃತಿಯ ಹೆಸರಿನಲ್ಲಿ ಅವರನ್ನು ಮೂಲೆಗೆ ತಳ್ಳುವ ಅಪಾಯದ ಬಗ್ಗೆಯೂ ಭಿನ್ನವಾಗಿ ಗಮನಿಸಬೇಕಿದೆ. ಉದಾಹರಣೆಗೆ ಕನ್ನಡದ ಕರಾವಳಿಯಲ್ಲಿ ಇರುವ ವಿಶಿಷ್ಟ ಕೊರಗ ಭಾಷೆ. ಕೊರಗರ ಜನಸಂಖ್ಯೆ ಕಡಿಮೆಯಾಗುತ್ತಾ ಬಂದಿದ್ದು ಈಗ ಸುಮಾರು 14 ಸಾವಿರ ಜನರಷ್ಟೇ ಉಳಿದುಕೊಂಡಿದ್ದಾರೆ ಎನ್ನಲಾಗುತ್ತಿದೆ. ದಲಿತರಿಗಿಂತ ದಲಿತರಾಗಿರುವ ಕೊರಗರ ಭಾಷೆಯೇನೋ ಉಳಿಯಬೇಕು, ಆದರೆ ಅವರ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಅವರನ್ನು ಇನ್ನಷ್ಟು ಶೋಷಣೆಗೆ ತಳ್ಳಬೇಕೆ? ಎನ್ನುವ ಪ್ರಶ್ನೆಯೂ ಇದೆ. ಕನ್ನಡದಲ್ಲೇ ಇರುವ ಹತ್ತಾರು ಪ್ರಾದೇಶಿಕ ಭಾಷಾ ವೈವಿಧ್ಯಗಳೂ ಅಳಿಯುತ್ತಿವೆ. ಯಾವುದೇ ಭಾಷೆ ಏಕರೂಪಕ್ಕೆ ಹೊರಳಿದರೆ, ಪ್ರಾದೇಶಿಕ ಸಂಸ್ಕೃತಿ ಅಳಿದಂತೆಯೇ. ಹಾಗೆಯೇ, ಭಾಷೆಗಳು ಅರಳುವುದು ಕೇವಲ ಲೈಬ್ರರಿಗಳಲ್ಲಿ ಅಲ್ಲ, ಜನಸಮುದಾಯದ ಮಧ್ಯೆ ಎನ್ನುವುದನ್ನೂ ನಾವು ಮರೆಯಬಾರದು.

■ **ಬಿ.ಎಂ. ಹನೀಫ್**


ಈಶ್ವರ್